1.00 ಪಿ.ಎಂ

ಅಧ್ಯಕ್ಷರು: ಈಗ ಮತ್ತೊಂದು ಸಂತಾಪ ಸೂಚಕ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಲಾಗಿದೆ ಎಂದು ಹೇಳಲು ಇಷ್ಟಪಡುತ್ತೇನೆ.

ಸಂತಾಪ ಸೂಚನೆ

ಅಧ್ಯಕ್ಷರು: ಸ್ವಾತಂತ್ರ ಹೋರಾಟಗಾರರು ಹಾಗೂ ಮಾಜಿ ಶಾಸಕರಾಗಿದ್ದ ಶ್ರೀ ದೊಡ್ಡತಿಮ್ಮಯ್ಯ, ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಶ್ರೀ ಹೆಚ್. ಕೆಂಚೇಗೌಡ, ಮಾಜಿ ಸಂಸತ್ ಸದಸ್ಯರಾದ ಸಿದ್ಧರಾಮರೆಡ್ಡಿ, ಹಾಗೂ ಖ್ಯಾತ ಹಿಂದುಸ್ಥಾನಿ ಗಾಯಕ ಶ್ರೀ ಕುಮಾರ ಗಂಧರ್ವರವರ ನಿಧನದ ಸುದ್ದಿಯನ್ನು ಸಹ ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರು ಆಗಿದ್ದ ಶ್ರೀಯುತ ದೊಡ್ಡ ತಿಮ್ಮಯ್ಯನವರು ದಿನಾಂಕ 09-12-91ರಂದು ನಿಧನ ಹೊಂದಿದರು. ಗುಳೂರು ಕ್ಷೇತ್ರದಿಂದ ಐದನೇ ವಿಧಾನ ಸಭೆಗೆ ಹಾಗೂ ಒಂದನೇ, ಎರಡನೇ ಮತ್ತು ಮೂರನೇ ಲೋಕಸಭೆಗೆ ಕೋಲಾರ ಕ್ಷೇತ್ರದಿಂದ ಆಯ್ಕೆಯಾಗಿದ್ದ ಅವರು 1963 ರಿಂದ 1967ರವರೆಗೆ ಕೇಂದ್ರದಲ್ಲಿ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ಸ್ಮರಣೀಯ ಸೇವೆ ಸಲ್ಲಿಸಿದ ಕೀರ್ತಿ ಶ್ರೀಯುತರದು. ಪ್ರಗತಿಪರ ನಿಲುವಿನ ದೊಡ್ಡತಿಮ್ಮಯ್ಯನವರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಸತತವಾಗಿ ಶ್ರಮಿಸಿದರು.

2. ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀಯುತ ಹೆಚ್. ಕೆಂಚೇಗೌಡ ಅವರು ದಿನಾಂಕ 14-12-1991ರಂದು ನಿಧನರಾದರು. ಶ್ರೀಯುತರು ಹಾಸನ ಜಿಲ್ಲೆಯ ಮಂಜರಾಬಾದ್ ಕ್ಷೇತ್ರದಿಂದ 1945 ರಿಂದ 1949ರವರೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸಲ್ಲಿಸಿದ ಅವರ ಪ್ರಾಮಾಣಿಕ ಸೇವೆ ಚಿರಸ್ಮರಣೆಯ ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಸಾಮಾಜದ, ಅದರಲ್ಲೂ ಕೃಷಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ತಮ್ಮ ಜೀವವಿಡಿ ದುಡಿದರು.

3.ನನ್ನ ಜೊತೆಯಲ್ಲಿ ಕೆಲವು ಕಾಲ ಲೋಕಸಭಾ ಸದಸ್ಯರಾಗಿದ್ದ ಶ್ರೀ ಸಿದ್ಧರಾಮರೆಡ್ಡಿ ಅವರು ದಿನಾಂಕ 20-02-1992 ರಂದು ನಿಧನರಾದರು. ವೃತ್ತಿಯಲ್ಲಿ ಕೃಷಿಕರು ಹಾಗೂ ನ್ಯಾಯವಾದಿಗಳಾಗಿದ್ದ ಶ್ರೀಯುತರು 5ನೇ ಮತ್ತು 6ನೇ ಲೋಕಸಭೆಗೆ ಗುಲ್ಬರ್ಗಾ ಕ್ಷೇತ್ರದಿಂದ ಆಯ್ಕೆಯಾಗಿ ಪ್ರಶಂಸನೀಯ ಸೇವೆ ಸಲ್ಲಿಸಿದ್ದಾರೆ. ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ ಹಾಗೂ ಸಹಕಾರ ಕ್ಷೇತ್ರಗಳಲ್ಲಿ ಆಸಕ್ತಿಯಿಂದ ದುಡಿದ ಶ್ರೀ ರೆಡ್ಡಿಯವರು ಯಾದಗಿರಿಯ ತಾಲ್ಲೂಕು ಅಭಿವೃದ್ಧಿ ಮಂಡಳಿ, ತಾಲ್ಲೂಕು ಬಾರ್ ಅಸೋಸಿಯೇಷನ್ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧ್ಯಕ್ಷರಾಗಿ ಈ ಸಂಸ್ಥೆಗಳ ಪುರೋಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ದುಡಿದ ಸಾಫಲ್ಯ ಹೊಂದಿದ ಸಾರ್ಥಕ ಜೀವಿ ಇವರು.

4. ಮಹಾನ್ ಕಲಾವಿದ, ಶ್ರೇಷ್ಠ ಹಿಂದುಸ್ಥಾನಿ ಗಾಯಕ ಹೆಸರಾಂತ ಕನ್ನಡಿಗ, ಕುಮಾರ ಗಂಧರ್ವ (ಶಿವಪುತ್ರಯ್ಯ ಸಿದ್ಧಯ್ಯ ಸ್ವಾಮಿ ಕೊಂಕಾಳಿಮಠ) ಅವರು ದಿನಾಂಕ 12-1-1992 ರಂದು ಮಧ್ಯಪ್ರದೇಶದ ದೇವಾಸ್‌ನಲ್ಲಿ ನಿಧನರಾದರು. ಸಂಗೀತ ಲೋಕದ ಖ್ಯಾತನಾಮರ ಸಾಲಿಗೆ ಸೇರಿದ ಶ್ರೇಯುತರು ಹಿಂದೂಸ್ಥಾನಿ ಶೈಲಿಯ ಶಾಸ್ತ್ರೀಯ ಸಂಗೀತ, ಭಕ್ತಿ ಸಂಗೀತ ಹಾಗೂ ಜಾನಪದ ಸಂಗೀತಗಳಲ್ಲಿ ವಿಶೇಷ

ಪ್ರಯೋಗ ನಡೆಸಿ, ಚಿಂತನಶೀಲಗಾಯಕರಾಗಿ, ಸಂಗೀತ ಶಾಸ್ತ್ರಜ್ಞರಾಗಿ ಜನಪ್ರಿಯರಾಗಿದ್ದರು. ಹುಟ್ಟು ಸಂಗೀತಗಾರರಾಗಿದ್ದ ಶ್ರೀಯುತರು ಸ್ವತಃ ಸಹೇಲಿ ತೋಡಿ, ಮಾಲಪತಿ, ಲಗನ್ ಗಾಂಧಾರ, ಬೃಹತ್ ಭೈರವ್, ಅಥವಾ ಸಂಚಾರಿ ಮುಂತಾದ ಹೊಸ ರಾಗಗಳನ್ನು ರಚಿಸಿ, ಹಿಂದುಸ್ಥಾನಿ ಸಂಗೀತ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆ. ಅವರಿಗೆ ಸಂದ ಪುರಸ್ಕಾರಗಳು ಹಲವು, ಅನೇಕ ಅವುಗಳಲ್ಲಿ ಪದ್ಮವಿಭೂಷಣ, ಪದ್ಮಭೂಷಣ, ಸಂಗೀತ ನಾಟಕ ಅಕಾಡಮಿ ಪ್ರಶಸ್ತಿ ಹಾಗೂ ಕಾಳಿದಾಸ ಸಮ್ಮಾನಗಳು ಪ್ರಮುಖವಾದವು.

ನಿಧನ ಹೊಂದಿದ ಈ ಮಾನ್ಯ ಸದಸ್ಯರುಗಳ ಗೌರವಾರ್ಥ ಸದನವು ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ ಎಂಬ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು): ಮಾನ್ಯ ಅಧ್ಯಕ್ಷರೇ, ಮಾನ್ಯ ದೊಡ್ಡತಿಮ್ಮಯ್ಯನವರು ಮಾನ್ಯ ಕೆಂಚೇಗೌಡರು ಹಾಗೂ ಮಾನ್ಯ ಸಿದ್ಧರಾಮರೆಡ್ಡಿಯವರುಗಳ ಪೈಕಿ ಸಿದ್ಧರಾಮರೆಡ್ಡಿಯವರ ನಿಕಟ ಸಂಪರ್ಕ ಹೊಂದಿದ್ದ ಅನೇಕ ಮಿತ್ರರು ಇಲ್ಲಿದ್ದಾರೆ. ಆದರೆ ದೊಡ್ಡತಿಮ್ಮಯ್ಯ ಮತ್ತು ಕೆಂಚೇಗೌಡರು ಹಳೆಯವರಾಗಿದ್ದರಿಂದ ಬಹಳ ವಯಸಾದ ವ್ಯಕ್ತಿಗಳಿಗೆ ಮಾತ್ರ ಅವರ ಸಂಪರ್ಕವಿತ್ತು. ಏಕೆಂದರೆ ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಆದರೆ ಶಾಸಕರಾಗಿದ್ದ ದೊಡ್ಡತಿಮ್ಮಯ್ಯನವರ ಸಂಪರ್ಕ ಇದ್ದವರು ಇಲ್ಲಿರುವುದು ಸಾಧ್ಯ ಇದೆ. ಇವರುಗಳ ನಿಧನ ಒಂದು ನಷ್ಟ. ಸಿದ್ದರಾಮರೆಡ್ಡಿಯವರು 5 ಮತ್ತು 6ನೇ ಲೋಕಸಭೆಗೆ ಚುನಾಯಿತರಾಗಿದ್ದವರು. ಅವರು ಕೃಷಿ ಗ್ರಾಮೀಣಾಭಿವೃದ್ಧಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅಪಾರ ಅನುಭವವನ್ನು ಹೊಂದಿದ್ದರು. ನಿಷ್ಠೆ ಹೊಂದಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಆಪ್ತರಿಗೆ ಸ್ನೇಹಕ್ಕೆ ಬಹಳ ಹೆಸರುವಾಸಿಯಾಗಿದ್ದವರು. ಆ ನಯ ನುಡಿ, ಅತಿ ಕಡಿಮೆ ನುಡಿಗೆ ಹೆಸರಾಗಿದ್ದವರು. ಅವರು ಮೊನ್ನೆ ತಾನೇ ಇಲ್ಲಿ ನನ್ನ ಬಳಿ ಬಂದು ಅನೇಕ ವಿಚಾರಗಳನ್ನು ಮಾತನಾಡಿ ಕೊಂಡು ಹೋದವರು. ಅವರ ನಿಧನದ ವಿಷಯ ಗೊತ್ತಾದ ಕೂಡಲೇ ಬಹಳ ದೊಡ್ಡ ಆಘಾತವನ್ನು ಅನುಭವಿಸಿದವರಲ್ಲಿ ನಾನೂ ಒಬ್ಬನಾಗಿ ದುಃಖ ಅನುಭವಿಸುವ ಸಂದರ್ಭ ಬಂತು. ಅವರು ಯಾದಗಿರಿ ತಾಲೂಕಿನಲ್ಲಿ ತಾಲೂಕು ಅಭಿವೃದ್ಧಿ ಮಂಡಲ್ ಹಾಗೂ ಅನೇಕ ಸಂಘಸಂಸ್ಥೆಗಳಲ್ಲಿ ಇದ್ದವರು ಬಾರ್ ಅಸೋಸಿಯೇಷನ್‌ನಲ್ಲೂ ಇದ್ದವರು. ಅವರನ್ನು ನಾವು ಕಳಿದುಕೊಂಡಿದ್ದೇವೆ.

ಮನಸ್ಸಿಗೆ ಹರ್ಷದಾಯಕ ಗೀತ, ಸಂಗೀತದ ಸಾರಸ್ವತ ಲೋಕಕ್ಕೆ ಅಪಾರ ಕಾಣಿಕೆಯನ್ನು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಮಹತ್ತರ ಕೊಡುಗೆಯನ್ನು ಕೊಟ್ಟಿರುವ ಕುಮಾರ ಗಂಧರ್ವ ನಮ್ಮ ಕನ್ನಡಿಗರೇ. ಅವರದೇ ಆದ ವಿಶಿಷ್ಟ ಶೈಲಿಯನ್ನು ಅವರು ಹುಟ್ಟಿಹಾಕಿದರು. ತಾವು ಹೇಳಿದಂತೆ ಅನೇಕ ರಾಗಗಳನ್ನು ರಚಿಸಿದರು. ಕೆಲವರು ಇರುವ ರಾಗಗಳಲ್ಲೇ ಹಾಡುತ್ತಾರೆ. ಇನ್ನು ಕೆಲವರು ಅವುಗಳ ಜತೆಯಲ್ಲಿ ಹೊಸ ರಾಗಗಳನ್ನು ಹುಟ್ಟಿಹಾಕುತ್ತಾರೆ. ಅಂದರೆ ಅದರಲ್ಲಿ ಎಸ್ಪೆರಿಮೆಂಟ್ ಮಾಡುತ್ತಾ ಮಾಡುತ್ತಾ ಹೋಗುವುದು. ಅಂತಹ ರಾಗಗಳು ಯಾವುವೆಂದು ತಾವು ಹೇಳಿದ್ದೀರಿ. ಉದಾಹರಣೆಗೆ, ಸಹೇಲಿ ತೋಡಿ. ಏಕೆಂದರೆ, ಗಾಂಧಾರ ಏನಿದೆ ಇವರದು ಲಗನ್ ಗಾಂಧಾರ ಎಂದು ಹೊಸ ರಾಗ ಹಾಗೆಯೇ ಭೈರವ್ ರಾಗದಲ್ಲಿ ಅನೇಕ ರಾಗಗಳಿವೆ. ಆದರೆ ಅದರಲ್ಲಿ ಬೃಹತ್ ಭೈರವ್ ಎಂಬುದು ಹೊಸ ರಾಗ. ಇವುಗಳನ್ನು ಹುಟ್ಟಿ ಹಾಕಿದರು. ಬೃಹತ್ ಭೈರವ್ ಅವರ ಶೈಲಿಯಾಗಿತ್ತು.

ಕೆಲವು ಸಲ ಕಾಲದ ಅಭಾವ ಇದ್ದುದರಿಂದ ಅವರ ನಿಕಟಸಂಪರ್ಕ ಪಡೆಯಲು ನನಗೆ ಆಗಲಿಲ್ಲ. ಆದರೆ ಸಂಗೀತ ಲೋಕಕ್ಕೆ ಅವರ ಕೊಡುಗೆ ಅಪಾರವಾಗಿತ್ತು.

ಕನ್ನಡಿಗರಾಗಿ ನಾವು ಅವರನ್ನು ಕಳೆದುಕೊಳ್ಳಲಿಲ್ಲ. ಮಹಾರಾಷ್ಟ್ರದ ಪೂನಾ ಭಾಗದವರು ಅವರನ್ನು ಕಳೆದುಕೊಳ್ಳಲಿಲ್ಲ. ಇಡೀ ಸಂಗೀತ ಲೋಕವೇ ಅವರನ್ನು ಕಳೆದುಕೊಂಡಿದೆ ಎಂಬುದು ಇಲ್ಲಿನ ವಿಚಾರ. ಅವರ ಹಲವಾರು ಗೌರವ ಪ್ರಶಸ್ತಿಗಳನ್ನು ಪಡೆದರು. ಭಾರತ ಸರ್ಕಾರ, ಮಧ್ಯಪ್ರದೇಶ ಸರ್ಕಾರಗಳ ಪ್ರಶಸ್ತಿಗಳು, ಕಾಳಿದಾಸ ಸಮ್ಮಾನ್‌ಗಳು ಈ ರೀತಿ ಅನೇಕ ಪ್ರಶಸ್ತಿಗಳು ಬಂದುವು.

ಅವರು ಮಧ್ಯಪ್ರದೇಶದ ದೇವಾಸ್‌ದಲ್ಲಿ ಒಂದು ಕಾರ್ಯಕ್ರಮಕ್ಕೆ ಹೋದಂಥ ಸಂದರ್ಭದಲ್ಲಿ ಅವರು ಹಠತ್ತಾಗಿ ನಿಧನರಾದರು ಎನ್ನತಕ್ಕಂಥ ವಿಚಾರ ಅವತ್ತಿಗೆ ನಮಗೆಲ್ಲರಿಗೂ ಗೊತ್ತಾಯಿತು. ಅವರನ್ನು ಕನ್ನಡ ಲೋಕ, ಮಹಾರಾಷ್ಟ್ರದ ಆ ಭಾಗ, ಅಖಿಂಡ ಹಿಂದೂಸ್ತಾನಿ ಸಂಗೀತ ಲೋಕ ಮತ್ತು ಸಂಗೀತ ಲೋಕ ಇವೆಲ್ಲವೂ ಕೂಡ ಕಳೆದುಕೊಂಡಿದೆ ಎನ್ನತಕ್ಕಂಥದ್ದು ಇಲ್ಲಿ ಎಲ್ಲರೂ ಕೂಡ ವಿಚಾರವನ್ನು ಮಾಡತಕ್ಕಂಥದ್ದು. ಅವರು ನಿಧಾನರಾಗಿರುವುದು ತುಂಬಲಾರದ ನಷ್ಟ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಮಾನ್ಯ ಅಧ್ಯಕ್ಷರು ಏನು ನಿರ್ಣಯವನ್ನು ಮಂಡನೆ ಮಾಡಿದ್ದೀರಿ. ಅದಕ್ಕೆ ನಾವು ಬೆಂಬಲವನ್ನು ಸೂಚಿಸಿ ಇವರೆಲ್ಲರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬಗಳಿಗೆ ಒಂದು ತುಂಬಲಾರದ ನಷ್ಟವಾಗಿದೆ. ಅದನ್ನು ಭರಿಸಿತಕ್ಕಂಥ ಶಕ್ತಿ ಅವರಿಗೆ ಬರಲಿ, ಈ ನಿರ್ಣಯವನ್ನು ನಾವೆಲ್ಲರೂ ಸೇರಿ ಒಕ್ಕೊರಲಿನಿಂದ ಇದನ್ನು ಕಳುಹಿಸಿಕೊಡೋಣ. ಇದಕ್ಕೆ ಮಾನ್ಯ ವಿರೋಧ ಪಕ್ಷದ ಉಪನಾಯಕರೂ ಮತ್ತು ನಾವೆಲ್ಲರೂ ಸೇರಿ ಒಕ್ಕೊರಲಿನಿಂದ ಇದಕ್ಕೆ ಬೆಂಬಲವನ್ನು ಈ ಸಂದರ್ಭದಲ್ಲಿ ಸೂಚಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ, ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೇ, ತಾವು ಈ ದಿವಸ ಮತ್ತೊಂದು ಸಂತಾಪ ಸೂಚಕ ನಿರ್ಣಯವನ್ನು ಈ ಸಭೆಯಲ್ಲಿ ಏನು ಮಂಡಿಸಿದ್ದೀರಿ. ಅದಕ್ಕೆ ನಾನು ಬೆಂಬಲವನ್ನು ಸೂಚನೆ ಮಾಡುತ್ತಾ ಕುಮಾರ ಗಂಧರ್ವ ಅವರ ನಿಧನ ನಿಜವಾಗಿಯೂ ಸಂಗೀತ ಲೋಕಕ್ಕೆ ಅಷ್ಟೇ ಅಲ್ಲ, ಇಡೀ ವಿಶ್ವಶಕ್ಕೆ ಸಂಗೀತ ಪ್ರೇಮಿಗಳಿಗೆ ಆಗಿರತಕ್ಕಂಥ ಒಂದು ಅಪಾರವಾದ ನಷ್ಟ. ಅವರು ನಮ್ಮ ರಾಜ್ಯದವರು ಎನ್ನತಕ್ಕಂಥ ಹೆಮ್ಮೆ ನಮಗೆಲ್ಲರಿಗೂ ಸಹಿತ ಬಹಳ ಇದೆ. ಅವರ ಒಂದು ನಿಧನಕ್ಕೆ ಶೋಕವನ್ನು ವ್ಯಕ್ತಪಡಿಸುವುದರಲ್ಲಿ ನಾನೂ ಸಹಿತ ನಿಮ್ಮ ಜೊತೆಯಲ್ಲಿ ಒಬ್ಬನಾಗಿದ್ದೇನೆ. ಶ್ರೀ ಸಿದ್ಧರಾಮರೆಡ್ಡಿಯವರ ಪರಿಚಯ ನಮ್ಮಲ್ಲಿ ಈ ಪೀಳಿಗೆಯ ಯುವಕರಿಗೆ ಬಹಳಷ್ಟು ಇಲ್ಲ. ಅವರು ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ನಮಗೆ ಅಂಥ ಪರಿಚಯವಿಲ್ಲ, ಶ್ರೀಮಾನ್ ದೊಡ್ಡತಿಮ್ಮಯ್ಯ ಅವರು ಅತ್ಯಂತ ಸರಳವಾದ ವ್ಯಕ್ತಿ. ಅವರು ಹಿರಿಯರು ಜಗಜೀವನರಾಮ್ ಅವರು ಕಾಂಗ್ರೆಸ್ ಪಕ್ಷದ ಡೆಮಾಕ್ರಸಿ ಸಿ.ಎಫ್.ಡಿ. ಪಾರ್ಟಿಯನ್ನು ಕಟ್ಟಿದಾಗ ಕಾಂಗ್ರೆಸ್‌ನ್ನು ಬಿಟ್ಟು ಸಿ.ಎಫ್.ಡಿ. ಮೂಲಕವಾಗಿ ನಮ್ಮ ಪಾರ್ಟಿಗೆ ಬಂದು, ಬಹಳಷ್ಟು ದಿನಗಳ ಕಾಲ ನಮ್ಮ ಪಾರ್ಟಿಯಲ್ಲಿ ಇದ್ದು ಕೆಲಸವನ್ನು ಮಾಡಿದವರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಏಳಿಗೆಗೋಸ್ಕರ ಬಹಳ ಅಭಿಮಾನ ಮತ್ತು ಕೆಲಸವನ್ನು ಮಾಡಬೇಕು ಎನ್ನತಕ್ಕಂಥ ಒಂದು ಆಸೆಯನ್ನು ಇಟ್ಟುಕೊಂಡಂಥ ವ್ಯಕ್ತಿ. ಕಳೆದ ಸಾರಿ ಕಾವೇರಿ ಅಧಿವೇಶನ ಅಂದರೆ ಹಿಂದೆ ನಡೆದಂಥ ಅಧಿವೇಶನದಲ್ಲಿ ಇಲ್ಲಿ ಬಂದು ನಮ್ಮ ಜೊತೆಯಲ್ಲಿ ಮಾತನಾಡಿ ಅನೇಕ ಅವರ ವೈಯಕ್ತಿಕ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿದ್ದರು. ಅವರು ಹಠಾತ್ತಾಗಿ ನಿಧನವಾಗಿರತಕ್ಕಂಥದ್ದು ನಮಗೆಲ್ಲರಿಗೂ ತುಂಬಾ ದುಃಖವಾಗಿದೆ ಮತ್ತು ಸಿದ್ಧರಾಮ ರೆಡ್ಡಿಯವರು ಹಾಗೂ ಕೆಂಚೇಗೌಡರ ನಿಧನಕ್ಕೂ ಸಹಿತ ಪ್ರತಿಪಕ್ಷದ ಸದಸ್ಯರ ಪರವಾಗಿ ಈ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಸಭೆಯು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕು.

(ಸದನವು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು: ದಿವಂಗತ ಕುಟುಂಬ ವರ್ಗದವರಿಗೆ ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿ ಕೊಡಲಾಗುವುದು ಈಗ ಸಭೆ ದಿವಂಗತ ಕೆ.ಹೆಚ್. ಪಾಟೀಲ್ ಮತ್ತು ಬಾಬಾ ಸಾಹೇಬ್ ರಾವ್ ಸಾಹೇಬ್ ಮಹಾಗಾಂವ್‌ಕರ್ ಅವರ ಗೌರವಾರ್ಥ ಮುಂದುವರೆದು ನಾಳೆ 11 ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 1-14ಕ್ಕೆ ಮುಕ್ತಾಯವಾಗಿ, ಮತ್ತೆ ದಿನಾಂಕ 25-2-1992 ರಂದು ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)